ಆ) ೧೧-೧೦-೧೯೮೮ಳಿಗೆ ಒಳಗೆ ಅಥವಾ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಸದರಿ ಲೇಔಟ್‌ನಲ್ಲಿ ಕಟ್ಟಡದ ನಕ್ಷೆಗೆ ಅನುಮತಿ ನೀಡಿರುತ್ತದೆಯೇ ?

ಇ) ಹಾಗಿದ್ದಲ್ಲಿ ೧೧-೧೦-೧೯೮೮ಳಿಗೆ ಹಿಂದೆ ಮತ್ತು ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಂಜೂರು ಮಾಡಿದ ನಕ್ಷೆಯ ಪ್ರಕಾರ ಈ ಬಡಾವಣೆಯಲ್ಲಿ ಕಟ್ಟಿರುವ ಕಟ್ಟಡಗಳ ಸ್ಥಿತಿ ಏನು ?

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರ ಹಾಗೂ ಆಹಾರ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು. ೧೧-೧೦-೧೯೮೮ಳಿಗೆ ನಂತರ ಮತ್ತು ಅದಕ್ಕೆ ಮುಂಚಿತವಾಗಿಯೂ ಲೇಔಟ್‌ನಲ್ಲಿ ಕಟ್ಟಡದ ನಕ್ಷೆಗೆ ಅನುಮತಿ ನೀಡಲಾಗಿದೆ.

ಇ) ಈ ಬಡಾವಣೆಯಲ್ಲಿ ಬೇರೆ ಮನೆಗಳಿಗೆ ಲೈಸೆನ್ಸ್‌ನ್ನು ಮುಂಜೂರಾತಿ ಮಾಡಿರುವುದರ ಬಗ್ಗೆ ಯಾವ ರೀತಿಯ ಉಲ್ಲೇಖವು ಉಚ್ಚ ನ್ಯಾಯಾಲಯದ ಆಜ್ಞೆಯಲ್ಲಿರುವುದಿಲ್ಲ ಆದರೆ ಉಚ್ಚ ನ್ಯಾಯಾಲಯದ ಆಜ್ಞೆಯಂ ಶ್ರೀ ದತ್ತಗುರು ಸದಾನಂದ ಸ್ಪಿರಿಚ್ಯುಯಲ್ ಮತ್ತು ಮೆಡಿಟೇಷನ್ ಸೆಂಟರ್ ರವರ ಕಡೆಗೆ ಆಗಿರುತ್ತದೆ. ಆದರೂ ಉಚ್ಚ ನ್ಯಾಯಾಲಯದ ಆಜ್ಞೆಗೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆಯಿರುತ್ತದೆ.

ಶ್ರೀ ಸಿ. ಕಣ್ಣನ್.—ಹೈಕೋರ್ಟ್ ಆರ್ಡರ್ ಮೇಲೆ ಸುಪ್ರೀಮಂ ಕೋರ್ಟಿಗೆ ಅಪೀಲ್ ಮಾಡಿರುವವರು ಯಾರು ? ಬಿಡಿಎ ನವರೋ ಅಥವಾ ಇನ್ನಾರು ?

SRI A. LAKSHMISAGAR.—The aggrieved party has gone to the Supreme Court.

ಅಧ್ಯಕ್ಷರು.—ಶ್ರೀ ಎಂ. ಶಿವಣ್ಣನವರ ಪ್ರಶ್ನೆ ಮುಂದಕ್ಕೆ ಹೋಗಿದೆ.

## ರಾಜ್ಯದಲ್ಲಿರುವ ಜೀತದಾಳುಗಳು

೯೭೧. ಶ್ರೀ ಹೆಚ್. ಕೆ. ಕುಮಾರಸ್ವಾಮಿ (ಬೇಲೂರು).—ಪಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವರ್ಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆಗೆ ಜೀತವಿಮುಕ್ತಿ ಹೊಂದಿದವರ ಸಂಖ್ಯೆ ಎಷ್ಟು ?

ಆ) ಇವರಿಗಾಗಿ ಇಲ್ಲಿಯವರೆಗೆ ಆಗಿರುವ ವೆಚ್ಚವೆಷ್ಟು ?

ಇ) ರಾಜ್ಯದಲ್ಲಿ ಜೀತದಾಳುಗಳು ಇನ್ನು ಸಾವಿರಾರು ಮಂದಿ ಇದ್ದು ಅವರು ಪಟ್ಟಿಗೆ ಸೇರದಿರುವ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಅವರಿಗೆ ಕಾಲಾವಕಾಶ ಕೊಟ್ಟು ಅರ್ಜಿಗಳನ್ನು ಸ್ವೀಕರಿಸಲಾಗುವುದೆ ?

ಈ) ಜೀತವಿಮುಕ್ತರಿಗೆ ಕೊಟ್ಟಿರುವ ಈಗಿನ ರೀತಿಯ ಸಹಾಯವನ್ನು ಶಾಶ್ವತ ಪರಿಹಾರ ರೂಪದಲ್ಲಿ ಕೊಡುವ ಯೋಜನೆ ಸರ್ಕಾರದಲ್ಲಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ ( ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವರ್ಕ್ಸ್ ಮಂತ್ರಿಗಳು).—

ಅ) ೩೫,೬೭೧

ಆ) ರೂ. ೧೪೫.೮೦ ಲಕ್ಷಗಳು.

ಇ) ಕಾನೂನು ರೀತ್ಯ ಈ ಲಾಭ ಪಡೆಯಬಹುದಾಗಿದೆ. ಇದಕ್ಕೆ ಕಾಲಮಿತಿ ಏನೂ ಇಲ್ಲ.

ಈ) ತಲಾ ೬೨೫೦ ರೂ. ಗಳ ಗ್ರಾಂಟ್ ಸಹಾಯದಿಂದ ಆರ್ಥಿಕಸ್ವತ್ತುಗಳನ್ನು ಕೂಡಿಸಲಾಗುತ್ತಿದೆ. ಇದಂ ಆಲ್ಲದೆ ಫಲಾನುಭವಿಯು ಬಡತನ ರೇಖೆ ದಾಟುವವರೆಗೆ, ಎಲ್ಲಾ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಸಹಾಯ ಸೌಲಭ್ಯ ಕಲ್ಪಿಸಲು ಎಲ್ಲಾ ವಿಶೇಷ ಜಿಲ್ಲಾಧಿಕಾರಿಗಳು-ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ ನಾನು ಕೇಳಿದ್ದ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ನನ್ನ ಪ್ರಕಾರ ರಾಜ್ಯದಲ್ಲಿ ಜೀತದಾಳುಗಳು ಸಾವಿರಾರು ಮಂದಿ ಇದ್ದಾರೆ. ಅವರನ್ನೆಲ್ಲ ಜೀತದಾಳುಗಳ ಪಟ್ಟಿಗೆ ಸೇರಿಸುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ? ಈಗಲೂ ಎಲ್ಲ ಹಳ್ಳಿಗಳಲ್ಲೂ ನೂರಾರು ಜೀತದಾಳುಗಳಿದ್ದಾರೆ. ಆದ್ದರಿಂದ ಹೊಸದಾಗಿ ಮತ್ತೆ ಸರ್ವೆ ಮಾಡಿಸುತ್ತೀರಾ ? ಇನ್ನೊಂದು ಏನಾಗಿದೆ ಎಂದರೆ ಇಂಪರ್ಸನೇಷನ್ ಆಗಿದೆ ಎಂದು ಅವರಿಗೆ ಕೊಡುತ್ತಿದ್ದ ರಿಲೀಫನ್ನೆಲ್ಲ ನಿಲ್ಲಿಸಿಬಿಟ್ಟಿದ್ದಾರೆ. ಜೀತದಾಳುಗಳ ಸಮಸ್ಯೆ ಆಗಿ ಹೋದದ್ದು ಎಂದೂ ಸರ್ಕಾರ. ಅಂದುಕೊಂಡಿದ್ದರೆ ಅದು ಸರಿಯಲ್ಲ. ಆದ್ದರಿಂದ ದಯವಿಟ್ಟು ರೀ ಸರ್ವೆ ಮಾಡಿಸಿ ಏನೇನು ಗ್ರಾಂಟ್ ಸಿಗಬೇಕೋ ಅದನ್ನು ಕೊಡಿಸುವ ವ್ಯವಸ್ಥೆ ಸರ್ಕಾರ ಮಾಡುತ್ತದೆಯೇ ? ಜೀತದಾಳುಗಳನ್ನು ಬಿಡುಗಡೆ ಮಾಡಲು ಕೆಲವು ಪ್ರೊಸೀಜರ್‌ಗಳು ಇವೆ ಅವರು ಅರ್ಜಿಗಳನ್ನು ಹಾಕಿ ಕೊಳ್ಳಬೇಕೂ, ನಂತರ ಅವರನ್ನು ವಿಚಾರಣೆ ಮಾಡಬೇಕು. ಹಾಗೆಯೇ ಮಾಡುವುದಕ್ಕೆ ಬರುವುದಿಲ್ಲ ಕಾನೂನು ಪ್ರಕಾರ ಸ್ಟೇ ತೆಗೆದುಕೊಳ್ಳುತ್ತಾರೆ. ಪ್ರತಿ ಜಿಲ್ಲೆಯಲ್ಲೂ ಕೂಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಮಿಟಿಗಳನ್ನು ಮಾಡಿದ್ದೇವೆ ಸಾರ್ವಜನಿಕರೂ ಅದರಲ್ಲಿ ಇದ್ದಾರೆ ಇಂತಹ ಕಡೆ ಜೀತದಾಳುಗಳಿದ್ದಾರೆ ಎಂದು ಜಿಲ್ಲಾಧಿಕಾರಿಗಳಿಗೆ ಅರ್ಜಿ ಹಾಕಿಸಬಹುದು ಇಲ್ಲವೇ ಸಾರ್ವಜನಿಕ ವ್ಯಕ್ತಿಗಳಾದರೂ ಇಂತಹ ಕಡೆ ಜೀತದಾಳುಗಳಿದ್ದಾರೆಂದು ಮಾಹಿತಿಯನ್ನು ಒದಗಿಸಬಹುದು ಅದಕ್ಕೆ ಕಾಲ ಮಿತಿ ಇಲ್ಲ, ಯಾವಾಗ ಬೇಕಾದರೂ ಮಾಡಬಹುದು ಕಾನೂನು ಪ್ರಕಾರ ನೋಟೀಸ್ ಕೊಡಬೇಕು, ವಿಚಾರಣೆ ನಡೆಯುತ್ತದೆ. ಉದಾಹರಣೆಗೆ ಹೇಳುವುದಾದರೆ ನಾಗಸಂದ್ರ ಗ್ರಾಮಕ್ಕೆ ನಾನೇ ಹೋಗಿದ್ದೆ, ಇಂತಹ ಕಡೆ ಜೀತದಾಳುಗಳಿದ್ದಾರೆಂದು ಹೇಳಿದರೂ ಕೂಡ ಅದನ್ನು ಐಡೆಂಟಿಫೈ ಮಾಡಬೇಕಾದರೆ ಸುಮಾರು ಒಂದೂವರೆ ವರ್ಷ ಆಯಿತು. ಹೀಯರಿಂಗ್ ಮಾಡಬೇಕು ನಾನು ಇದರ ಬಗ್ಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದೇನೆ. ಯಾರಿಗೆ ಸಹಾಯ ಕೊಡುತ್ತಿದ್ದಾರೆ ಎಂದು ಗೊತ್ತಾಗುತ್ತಿಲ್ಲವೆಂದು ಹೇಳಿದಿರಿ ಜೀತದಾಳುಗಳು ಎಲ್ಲೆಲ್ಲಿ ಹೆಚ್ಚು ಇದ್ದಾರೆ ಆಯಾ ತಾಲ್ಲೂಕಿನಲ್ಲಿ ಎಂಬುದನ್ನು ಸಮೀಕ್ಷೆ ನಡೆಸಿ ಎಂದೂ ಕಟ್ಟುನಿಟ್ಟಾದ ಆದೇಶವನ್ನು ನಾನು ಕೊಟ್ಟಿದ್ದೇನೆ. ಏನುಮಾನವಿದ್ದರೆ ಇಂತಹ ಕಡೆ ಇದೆ ಎಂದೂ ಸ್ಪಷ್ಟವಾಗಿ ನಿಖರವಾದ ಮಾಹಿತಿಯನ್ನು ಕೊಟ್ಟರೆ ನಾನೂ ವಿಚಾರ ಮಾಡಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಶ್ರೀ ಹೆಚ್. ಕೆ. ಕುಮಾರಸ್ವಾಮಿ ಯವರ ಪರವಾಗಿ).—ಎಮರ್ಜೆನ್ಸಿಯಲ್ಲಿ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡರೋ ಅದರ ಬಗ್ಗೆ ಇಲ್ಲಿಯವರೆಗೂ ಒಬ್ಬರನ್ನೂ ಐಡೆಂಟಿಫೈ ಮಾಡುವ ಆಜ್ಞೆಗೆ ಹೋಗಿಲ್ಲ ಅದನ್ನು ತಾವು ಒಪ್ಪಿಕೊಳ್ಳಬೇಕು. ತಾವು ಮಂತ್ರಿಯಾದ ಮೂರು ವರ್ಷಗಳಲ್ಲಿ ಈ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಅವನ ಹೆಸರೇ ಜೀತದಾಳು ಎಂದು ಕಂಪ್ಲೇಂಟ್ ಕೊಟ್ಟು ನಾನು ಜೀತದಾಳು ಆಗಿದ್ದೇನೆ ಎಂದು ತನ್ನ ಯಜಮಾನನ ಹೆಸರನ್ನು ಕೊಡುವ ಶಕ್ತಿ ಅವನಿಗಿದ್ದಿದ್ದರೆ ಅವನು ಜೀತದಾಳು ಆಗುತ್ತಿರಲಿಲ್ಲ. ನೀವೇ ಇನ್‌ಜಿಯೇಟ್ ಮಾಡಿ ಸರಕಾರದ ಅಧಿಕಾರಿಗಳನ್ನು ಅಲ್ಲಿಗೆ ಕಳಿಹಿಸಿ ಐಡೆಂಟಿಫೈ ಮಾಡುತ್ತೇವೆಂದು ಹೇಳಿದರೆ, ಜೀತದಾಳು ಬಿಡುಗಡೆಯಾದರೂ ಆಗುತ್ತಾನೆ, ಮತ್ತು ಅವನಿಗೆ ರಿಲೀಫ್ ಸಿಗದಿದ್ದರೂ, ರೀ ಸರ್ವೆ ಮಾಡಿಸುವುದಕ್ಕೆ ಒಪ್ಪಿಕೊಳ್ಳುತ್ತೀರಾ ಎಂದು ಮಾನ್ಯ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಪ್ರತಿ ಜಿಲ್ಲೆಯಲ್ಲೂ, ಸಬ್ ಡಿವಿಜನಲ್ಲಿಯೂ ಕೂಡ ಇದಕ್ಕಾಗಿ ವಿಜಿಲೆನ್ಸ್ ಕಮಿಟಿ ಇದೆ ಆ ಕಮಿಟಿಯಲ್ಲಿ ಸಾರ್ವಜನಿಕರೂ ಇದ್ದಾರೆ ಅವರು ಸರ್ವೆ ಮಾಡಿ ಜಿಲ್ಲಾಧಿಕಾರಿಗಳ ಗಮನಕ್ಕೆ ಇದನ್ನು ತಂದರೆ ಅವರನ್ನು ಪುನರ್ವಸತಿ ಮಾಡಿಸುವುದಕ್ಕೆ ನಮ್ಮ ಅಭ್ಯಂತರವಿಲ್ಲ ಬಹಳ ದೊಡ್ಡ ಸಂಖ್ಯೆಯಲ್ಲಿ ಜೀತದಾಳುಗಳಿದ್ದಾರೆ. ಈಗಾಲೇ ೬೨,೦೦೦ ಜನರನ್ನು ಬಿಡುಗಡೆ ಮಾಡಿದು ೩೫,೦೦೦ ಜನರ ಪುನರ್ ವಸತಿ ಇನ್ನೂ ಆಗಿಲ್ಲ, ಸಾರ್ವಜನಿಕವಾಗಿ ಅವರ ಗಮನಕ್ಕೆ ಬಂದಂತಹದ್ದನ್ನು ಆ ಸಮಿತಿಗಳು ಮಾಡಬಹುದು.

ಶ್ರೀ ಬಸವಲಿಂಗಪ್ಪ

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಪ್ರಶ್ನೆ ೬೪೪ (೧೬೫೫)

ಮತ್ತು

ಪ್ರಶ್ನೆ ೬೪೫ (೧೯೩೮)

ಅಧ್ಯಕ್ಷರು.—ಈ ಪ್ರಶ್ನೆಗಳನ್ನು ಮುಂದಕ್ಕೆ ಹಾಕಲಾಗಿದೆ.

ಶ್ರೀ ಬಸವರಾಜ ಪಾಟೀಲ್

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಬಿ. ಹೆಚ್. ಯಂಕನಾಯ್ಕ

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದಾದ ಮೇಲೆ ಸಿಗುವುದಿಲ್ಲ ಮಾನ್ಯ ಸಚಿವರ್‌ಸಾಬ್ ರವರು ನಮ್ಮ ಕೈಗೆ ನಮ್ಮ ಪ್ರಶ್ನೆಗಳು ಹಾಗೇ ಉಳಿಯುತ್ತವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಅಧಿವೇಶನ ಪ್ರಾರಂಭವಾದ ಮೇಲೆ ೫೬–೬ ಪ್ರಶ್ನೆಗಳನ್ನು ಮುಂದೂಡಲಾಗಿದೆ ಎಂದು ಹೇಳಿದ್ದೀರಿ ಬಜೆಟ್ ಅಧಿವೇಶನ ಸುಮಾರು ಎರಡು ತಿಂಗಳು ನಡೆಯುತ್ತದೆ ಸರಕಾರದ ಎಫಿಷಿಯೆನ್ಸಿ ಏನು ಎಂದು ಇದರಿಂದ ಗೊತ್ತಾಗುತ್ತದೆ. ತಾವು ನಮಗೆ ರಕ್ಷಣೆ ಕೊಡಬೇಕು ನಾನು ಹಾಕಿದ ಐದು ಪ್ರಶ್ನೆಗಳಲ್ಲಿ ಒಂದನ್ನೂ ಕೇಳುವುದಕ್ಕೆ ಆಗಿಲ್ಲ ಮುಂದೆ ಹಾಕಲಾಗಿದೆ ಎಂದು ಹೇಳುತ್ತೀರಿ, ಮುಂದೆಯೂ ಬರಲಿಲ್ಲ ಎಲ್ಲಿ ಹೋಯಿತೋ ನನಗಂತೂ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು.—ಅಧಿವೇಶನ ಮುಗಿದ ಮೇಲೆ ಉತ್ತರ ತರಿಸಿಕೊಂಡು ಕೊಡಬಹುದು ಅದಕ್ಕೆ ಅವಕಾಶ ಇದೆ.

SRI M. S. KRISHNAN.—They are giving scant respect to this House.

## ಬಿ. ಡಿ. ಎ.ನಲ್ಲಿ ನಿವೇಶನಗಳ ವಿತರಣೆಯ ಬಗ್ಗೆ

೧೬೦೪ ಶ್ರೀ ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ ಆಹಾರ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧–೩–೮೩ ರಿಂದ ೨೫–೮–೮೫ ರವರೆಗೆ ನಿವೇಶನ ವಿತರಣೆಗಾಗಿ ಎಷ್ಟು ಬಾರಿ ಸಾರ್ವಜನಿಕರಿಂದ ಅರ್ಜಿಗಳನ್ನು ಕರೆದಿದೆ ಮತ್ತು ಪ್ರತಿಸಲ ಶೇಖರಣೆಯಾದ ಹಣದ ಮೊತ್ತ ಎಷ್ಟು ?

ಆ) ಈ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದವರಲ್ಲಿ ಎಷ್ಟು ಜನರಿಗೆ ಈವರೆಗೆ ನಿವೇಶನ ವಿತರಣೆ ಮಾಡಲಾಗಿದೆ ?

ಇ) ಎಲ್ಲಾ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಲು ಬೇಕಾಗಿರುವ ಭೂ ವಿಸ್ತೀರ್ಣ ಎಷ್ಟು ?

ಈ) ಪ್ರಸ್ತುತ ವಿತರಣೆಯಾಗದಿರುವ ಭೂಮಿಯ ವಿಸ್ತೀರ್ಣ ಎಷ್ಟು ?